2. 1984ರಲ್ಲಿ ಶ್ರೀ ಟಿ.ಎಂ. ಹುಂಡೇಕರ್ ಸಮಿತಿ,
3. 1986ರಲ್ಲಿ ಶ್ರೀ ಪಿ.ಸಿ. ಗದ್ದೀಗೌಡರ್ ಸಮಿತಿ.

ಆ) 1. ಶ್ರೀ ಎಂ. ವಾಸುದೇವರಾವ್ ಅವರ ಸಮಿತಿ 1975ರಲ್ಲಿ,
2. ಶ್ರೀ ಟಿ.ಎಂ. ಹುಂಡೇಕರ್ ಅವರ ಸಮಿತಿ 1986ರಲ್ಲಿ,
3. ಶ್ರೀ ಪಿ.ಸಿ. ಗದ್ದೀಗೌಡರ್ ಅವರ ಸಮಿತಿ 1987ರಲ್ಲಿ,
ವರದಿಗಳನ್ನು ಸಲ್ಲಿಸಿವೆ.

ಇ) ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್-ರಚನೆ ಬಗ್ಗೆ ರಚಿಸಲಾಗಿದ್ದ ಮೂರು ಸಮಿತಿಗಳು ನೀಡಿದ ವರದಿಯನ್ನು ಪರಿಶೀಲಿಸಿ, ಸೂಕ್ತ ಅಭಿಪ್ರಾಯ ನೀಡುವಂತೆ ಕೋರಿ ಸಚಿವ ಸಂಪುಟವು ಸಚಿವ ಸಂಪುಟ ಉಪ-ಸಮಿತಿಯನ್ನು ರಚಿಸಿತ್ತು. ಈ ಉಪ-ಸಮಿತಿಯು ವಿವಿಧ ಇಲಾಖಾ ಕಾರ್ಯದರ್ಶಿಗಳ ಸಮಿತಿಯನ್ನು ರಚಿಸಿ, ಹೊಸದಾಗಿ ಜಿಲ್ಲೆ ಹಾಗೂ ತಾಲ್ಲೂಕುಗಳನ್ನು ರಚಿಸುವಾಗ ಭೌಗೋಳಿಕ, ಆಡಳಿತಾತ್ಮಕ, ಆರ್ಥಿಕ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿಸಿ, ಪ್ರಸ್ತಾವನೆ ಸಲ್ಲಿಸಲು ನಿರ್ದೇಶಿಸಿತ್ತು. ಅಧಿಕಾರಿಗಳ ಸಮಿತಿಯು ಸುದೀರ್ಘ ಪರಿಶೀಲನೆಯ ನಂತರ ಅಂತಿಮ ವರದಿಯನ್ನು ತಯಾರಿಸಿದೆ.

ನವೆಂಬರ್, 1992ರಲ್ಲಿ ಹೊಸ ಸರ್ಕಾರ ರಚನೆಯಾದ ನಂತರ ಹಿಂದಿನ ಸಚಿವ ಸಂಪುಟದ ಉಪ-ಸಮಿತಿಯು ಅಸ್ತಿತ್ವದಲ್ಲಿರುವುದಿಲ್ಲವಾದ ಕಾರಣ, ದಿನಾಂಕ: 3-8-93ರಂದು ಹೊಸದಾಗಿ ಸಚಿವ ಸಂಪುಟ ಉಪ-ಸಮಿತಿಯನ್ನು ರಚಿಸಲಾಗಿದೆ. ಹೊಸದಾಗಿ ರಚಿಸಲಾದ ಸಚಿವ ಸಂಪುಟದ ಉಪ-ಸಮಿತಿಯು ದಿನಾಂಕ: 7-9-93 ರಂದು ಸಭೆ ಸೇರಿ, ಜಿಲ್ಲಾ ವಿಂಗಡಣೆಯಿಂದ ಆಗುವ ಹೆಚ್ಚುವರಿ ವೆಚ್ಚದ ವಿವರ ಕೇವಲ ಕಂದಾಯ ಇಲಾಖೆಗೆ ಸೀಮಿತವಾಗಿ ಸಿದ್ಧಪಡಿಸಿರುವುದರಿಂದ, ಇತರೆ ಇಲಾಖೆಗಳಿಗೆ ಮುಖ್ಯವಾಗಿ ಜಿಲ್ಲಾ-ಪರಿಷತ್ತಗಳಿಗೆ ಆಗತ್ಯವಿರುವ ಹೆಚ್ಚುವರಿ ವೆಚ್ಚದ ವಿವರಗಳನ್ನು ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದೆ. ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್-ರಚನೆ ಮಾಡಿದರೆ ಎಲ್ಲಾ ಇಲಾಖೆಗಳು ಹೊಸದಾಗಿ ಸ್ಥಾಪಿಸಲಾಗುವ ಜಿಲ್ಲಾ ಕಛೇರಿಗಳು, ಉಪ-ವಿಭಾಗ ಕಛೇರಿಗಳು ಹಾಗೂ ತಾಲ್ಲೂಕು ಕಛೇರಿಗಳಿಗೆ ತಗಲುವ ಅಂದಾಜು ವೆಚ್ಚವನ್ನು ಆರ್ಥಿಕ ಇಲಾಖೆಯು ನೀಡಿದೆ.

ದಿನಾಂಕ: 3-8-93ರ ಆದೇಶ ಸಂ.ಆರ್ಡಿ 42 ಎಲ್‌ಆರ್‌ಡಿ 87, ರಲ್ಲಿ ರಚಿಸಲಾದ ಸಚಿವ ಸಂಪುಟದ ಉಪ-ಸಮಿತಿಗೆ ಹಿಂದಿನ ಮಾನ್ಯ ಕಂದಾಯ ಸಚಿವರು ಅಧ್ಯಕ್ಷರಾಗಿದ್ದು, ಈಗ ಹಿಂದಿನ ಮಾನ್ಯ ಕಂದಾಯ ಸಚಿವರು ಸಚಿವ ಸಂಪುಟದಲ್ಲಿ ಇಲ್ಲದೇ ಇರುವುದರಿಂದ ದಿನಾಂಕ: 3-8-93ರಲ್ಲಿ ರಚಿಸಲಾಗಿರುವ ಸಚಿವ ಸಂಪುಟದ ಉಪ-ಸಮಿತಿಯನ್ನು ಪುನರ್-ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸಚಿವ ಸಂಪುಟದ ಉಪ-ಸಮಿತಿಯನ್ನು ಪುನರ್-ರಚಿಸಿದ ನಂತರ, ಈ ಉಪ-ಸಮಿತಿಯು ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್-ರಚಿಸುವ ವಿಷಯವನ್ನು ಪರಿಶೀಲಿಸಿ, ನಿರ್ದಿಷ್ಟ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಸಲ್ಲಿಸುವುದು. ಸಚಿವ ಸಂಪುಟದ ತೀರ್ಮಾನದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಪರಿಶೀಲನೆಯ ನಂತರ ಕ್ರಮ ಕೈಗೊಳ್ಳಲಾಗುವುದು.

ಮಂಡ್ಯ ನಗರಸಭೆಗೆ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡುವುದರ ಬಗ್ಗೆ

63 - ಶ್ರೀ ಆತ್ಮಾನಂದ, ಎಂ.ಎಸ್ (ಮಂಡ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿವಿಧ ನಗರಸಭೆಗಳಿಗೆ ಡೆವಲಪ್ಮೆಂಟ್ ಗ್ರಾಂಟ್ ಅನ್ನು ಅನುದಾನವನ್ನಾಗಿ ಕೊಡಲು ಸರ್ಕಾರ ಎಷ್ಟು ಹಣವನ್ನು ನಿಗದಿ ಮಾಡಿರುವುದು?

ಆ) ಈವರೆಗೆ, ಎಷ್ಟು ನಗರಸಭೆಗಳಿಗೆ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡಲಾಗಿರುವುದು?

ಇ) 1992-93ನೇ ಹಾಗೂ 1993-94ನೇ ಸಾಲಿನಲ್ಲಿ ಮಂಡ್ಯ ನಗರಸಭೆಗೆ ಅಭಿವೃದ್ಧಿ ಅನುದಾನವನ್ನು (ಡೆವಲಪ್ಮೆಂಟ್ ಗ್ರಾಂಟ್) ಬಿಡುಗಡೆ ಮಾಡದೇ ಇರಲು ಕಾರಣಗಳೇನು?

ಈ) ಮಂಡ್ಯ ನಗರಸಭೆಗೆ ಈ ಅಭಿವೃದ್ಧಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುತ್ತದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು);

ಅ) 1993-94ನೇ ಸಾಲಿನ ಆಯವ್ಯಯದಲ್ಲಿ ರೂ.250.00ಲಕ್ಷಗಳನ್ನು ಒದಗಿಸಲಾಗಿತ್ತಲ್ಲದೇ ಸುಮಾರು ರೂ.90.00 ಲಕ್ಷಗಳನ್ನು ಹೆಚ್ಚಿಗೆ ಒದಗಿಸಲಾಗಿದೆ.

ಆ) ಒಟ್ಟು ಈವರೆಗೆ 7 ನಗರಸಭೆಗಳಿಗೆ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) 1992-93ನೇ ಸಾಲಿನಲ್ಲಿ ಬಿಡುಗಡೆ ಮಾಡಿಲ್ಲ. ಆದರೆ, 1993-94ನೇ ಸಾಲಿನಲ್ಲಿ ರೂ. 10.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

L.I.G. Houses & M.I.G. Houses in Channapatna.

91- Sri. Sadath Ali Khan, (Channapatna) :

Will the Minister for Housing be please to state

1. *Whether is has come to the notice of the Government that the demand for LIG and MIG houses in Channapatna Taluk.*
2. *If so, the action taken by the Government to construct additional MIG and LIG houses from the KHB in Channapatna Taluk.*
3. *When it will be constructed?*

Sri. Gopinatha Sandra (Minister for Housing) :

1. Yes

2. The Housing Board has taken up construction of 74 LIG and 82 MIG houses in Channapatna under I Phase. The Board is also contemplating construction of additional houses under II Phase.

3. Construction will be taken up on obtaining loan assistance from HUDCO.

ವಿದ್ಯಾರ್ಥಿನಿಲಯ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯದ ನಿರ್ಮಾಣ ಕುರಿತು.

89-ಶ್ರೀ ಸಾದತ್ ಆಲಿ - (ಚನ್ನಪಟ್ಟಣ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?